C.C. No.- 582/2017
CW-7 / PW-5

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಗಂಗಾವತಿ.

ಸಾಕ್ಷಿಯನ್ನು ದಿನಾಂಕ- **09.05.2024** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ವಿಶ್ವನಾಥ |
| ತಂದೆ / ಗಂಡನ ಹೆಸರು- | ಬಸವರಾಜ |
| ವಯಸ್ಸು- | 50 ವರ್ಷಗಳು |
| ಉದ್ಯೋಗ- | ತಹಶೀಲ್ದಾರ, ಕನಕಗಿರಿ |
| ವಾಸಸ್ಥಳ- | ಕನಕಗಿರಿ |

ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-

ನಾನು 2016 ರಿಂದ 2019 ರವರೆಗೆ ನಾನು ಉಪ ತಹಶೀಲ್ದಾರನಾಗಿ ಸಿದ್ದಾಪುರದಲ್ಲಿ ಕಾರ್ಯವನ್ನು ನಿರ್ವಹಿಸುತ್ತಿರುವಾಗ ಸೆಪ್ಟೆಂಬರ್-2016 ರಿಂದ ನವೆಂಬರ್-2016 ರವರೆಗೆ ಪ್ರಭಾರಿ ಆಹಾರ ಶಿರಸ್ತೆದಾರರು, ಕಂದಾಯ ಇಲಾಖೆ ಗಂಗಾವತಿಯಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿ: 13.09.2016 ರಂದು ಬೆಳಗಿನ ಜಾವ 1 ಗಂಟೆಗೆ ಚಾಸಾ-1, 8 ರಿಂದ 13 ರವರು ಹಾಗೂ ನಾನು ಕೀರ್ತಿ ರೈಸ್ ಮಿಲ್ಲಿಗೆ ಹೋಗಿದ್ದೆವು. ಚಾಸಾ-1 ರವರಿಗೆ ಸದರಿ ರೈಸ್ ಮಿಲ್ಲಿನಲ್ಲಿ ಅನಧಿಕೃತವಾಗಿ ಅಕ್ಕಿ ಮತ್ತು ಗೋಧಿ ಸಂಗ್ರಹಣೆ ಮಾಡಿರುವ ಕುರಿತು ಮಾಹಿತಿ ಬಂದ ಮೇರೆಗೆ ನಾವು ಸದರಿ ರೈಸ್ ಮಿಲ್ಲಿನ ಗೋಡೌನಿಗೆ ಭೇಟಿ ನೀಡಿದಾಗ ಅಲ್ಲಿ 112 ಕ್ವಿಂಟಲ ಅಕ್ಕಿ ಹಾಗೂ 61.5 ಕ್ವಿಂಟಲ ಗೋಧಿ ಸಂಗ್ರಹಣೆ ಮಾಡಿರುವುದು ಕಂಡು ಬಂದಿರುತ್ತದೆ. ಅದರ ಅಂದಾಜು ಕಿಮ್ಮತ್ತು ಆ ದಿನದಂದು ರೂ. 4,02,863/- ಇತ್ತು. ಸದರಿ ಅಕ್ಕಿ ಮತ್ತು ಗೋಧಿಯನ್ನು ಸಂಗ್ರಹಣೆ ಮಾಡಿರುವ ಕುರಿತು

ಸದರಿ ರೈಸ್ ಮಿಲ್ ಮಾಲೀಕರಿಗೆ ಪರವಾನಿಗೆ ಪತ್ರವನ್ನು ಕೇಳಲಾಗಿ, ಅವರು ಯಾವುದೇ ದಾಖಲಾತಿಗಳನ್ನು ತೋರಿಸಿರುವುದಿಲ್ಲ. ಸದರಿ ಅಕ್ಕಿ ಹಾಗೂ ಗೋಧಿಯನ್ನು ಅನಧೀಕೃತವಾಗಿ ಸಂಗ್ರಹಣೆ ಮಾಡಿರುತ್ತಾರೆ ಎಂದು ನಾವು ಅವುಗಳನ್ನು ಜಪ್ತು ಮಾಡಿಕೊಂಡು ಸದರಿ ಗೋಡೌನನಲ್ಲಿಯೇ ದಾಸ್ತಾನು ಮಾಡಿರುತ್ತೇವೆ. ಸದರಿ ಗೋಡೌನಿಗೆ ಬೀಗ ಹಾಕಿ ಅದಕ್ಕೆ ಬಟ್ಟೆ ಕಟ್ಟಿ ಸೀಲು ಮಾಡಿರುತ್ತೇವೆ. ನಾವು ಹೋದ ಸಮಯದಲ್ಲಿ ಯಾವುದೇ ವಾಹನಗಳು ಸಿಗದೇ ಇರುವುದರಿಂದ ನಾವು ಜಪ್ತು ಮಾಡಿಕೊಂಡಿರುವ ಅಕ್ಕಿ ಮತ್ತು ಗೋಧಿ ಚೀಲಗಳನ್ನು ಅದೇ ಗೋಡೌನಿನಲ್ಲಿ ಇಟ್ಟು ಸೀಲು ಮಾಡಿ ಹೋಗಿರುತ್ತೇವೆ. ಬೆಳಿಗ್ಗೆ 11-30 ಗಂಟೆಗೆ ನಾವೆಲ್ಲರೂ ಮತ್ತೆ ಗೋಡೌನಿಗೆ ಹೋಗಿ ನೋಡಿದಾಗ ಅಕ್ಕಿ ಮತ್ತು ಗೋಧಿಯ ಚೀಲಗಳನ್ನು ಹಿಂದಿನ ಬಾಗಿಲಿನಿಂದ ಬದಲಾಯಿಸಿರುತ್ತಾರೆ. ನಾವು ನೋಡಿದಾಗ ಸದರಿ ಅಕ್ಕಿ ಕುಚಲಕ್ಕಿ ಇರುವ 161 ಚೀಲಗಳನ್ನು ಇಟ್ಟಿದ್ದರು. ಸದರಿ ಅಕ್ಕಿ ಚೀಲಗಳನ್ನು ಪಂಚನಾಮೆಯನ್ನು ಮಾಡಿ ಸರಕಾರಿ ಗೋಡೌನಿಗೆ ತಂದು ದಾಸ್ತಾನು ಮಾಡಿರುತ್ತೇವೆ. ಈ ಕುರಿತು ಚಾಸಾ-1 ರವರು ಆರೋಪಿ ವಿರುದ್ಧ ಫಿರ್ಯಾದಿ ನೀಡಿರುತ್ತಾರೆ. ಸದರಿ ಘಟನೆ ಕುರಿತು ನಾನು ಪೊಲೀಸರಿಗೆ ದಿನಾಂಕ 17.09.2016 ರಂದು ಹೇಳಿಕೆಯನ್ನು ನೀಡಿರುತ್ತೇನೆ.

3. ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ, ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಯು ಆರೋಪಿ ಈ ದಿನ ಗೈರು ಹಾಜರಿರುತ್ತಾರೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀಸವಾಲು ಮಾಡಲು ಸಮಯಾವಕಾಶವನ್ನು ಕೋರಿದ್ದು, ಯಾವುದೇ ಸಮಂಜಸ ಕಾರಣ ನೀಡದೇ ಇರುವುದರಿಂದ ಸಾಕ್ಷಿಯ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಗಂಗಾವತಿ.